O.S .No.5/2012
DW-1

ದಿನಾಂಕ: 06.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ

ದಿಃ 18.11.2004 ರಂದು 1 ನೇ ಪ್ರತಿವಾದಿ ಮತ್ತು ಮೃತ 3 ನೇ ಪ್ರತಿವಾದಿಗಳ ನಡುವೆಯಾದ ನಿಪಿ-1 ಕಾನೂನು ಬದ್ದ ವಿಭಾಗ ಪತ್ರ ಎಂದರೆ ಸರಿ. ನಿಪಿ-1 ರಲ್ಲಿ ನಮೂದು ಇರುವ ಆಸ್ತಿಯನ್ನೇ 1 ಮತ್ತು 3 ನೇ ಪ್ರತಿವಾದಿಗಳ ವಾರಸುದಾರರು ಅನುಭವ ಮಾಡಿಕೊಂಡು ಬರುತ್ತಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಮೋಸ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಪಿ-1 ರಂತೆ ವಿಭಾಗ ಪತ್ರದಲ್ಲಿ ನಿಮಗೆ ಮೋಸ ಆಗಿದೆ ಎಂದು ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಾನು ಮೃತ 3 ನೇ ಪ್ರತಿವಾದಿ ಪುಟ್ಟಪ್ಪನ ಸ್ವಂತ ಮಗ. ನಿಮ್ಮ ಪ್ರತಿವಾದ ಪತ್ರದಲ್ಲಿ 2006 ನೇ ಸಾಲಿನಲ್ಲಿ ದಾವೆ ಹೂಡಿದ ಬಗ್ಗೆ ನಮೂದಿಸಿದ್ದು, ಅದಕ್ಕೆ ಪುಷ್ಟೀಕರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿ ಏನು ಪರಿಹಾರ ಕೋರಿ ದಾವೆ ಹೂಡಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಾನು ಪ್ರೌಢ ಶಾಲೆವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಡಿ-1 ರಲ್ಲಿ ಪಂಚಾಯಿತಿಯ ದಾನ ಪತ್ರ ಮತ್ತು ಖಾತೆ ವರ್ಗಾವಣೆ ಒಪ್ಪಿಗೆ ಪತ್ರ ಎಂದು ನಮೂದು ಇದೆ ಎಂದರೆ ಸರಿ. ನಿಡಿ-1 ನ್ನು ಪಂಚಾಯಿತಿಯವರು ದಾನ ಕೊಟ್ಟಿಲ್ಲ, 1 ನೇ ಪ್ರತಿವಾದಿ ದಾನ ಮಾಡಿರುತ್ತಾರೆ. ನಿಡಿ-1 ಕಾನೂನುಬದ್ದ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ಮಾಹಾದೇವಮ್ಮನಿಗೆ ನಿಡಿ-1 ರಲ್ಲಿ ನಮೂದು ಇರುವ ತಪಶೀಲು ಆಸ್ತಿ ಖಾತೆ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

2 ನೇ ಪ್ರತಿವಾದಿ ಹೆಂಡತಿ ಹೆಸರು ಲತಾ. ನಿಡಿ-1 ರಲ್ಲಿ ನಮೂದು ಇರುವ ತಪಶೀಲು ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಯಾವುದು ಹಕ್ಕು, ಅಧಿಕಾರ, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ನಮೂದು ಇರುವ ತಪಶೀಲು ಆಸ್ತಿಯಲ್ಲಿ 1 ನೇ ಪ್ರತಿವಾದಿ ಹಕ್ಕು, ಅಧಿಕಾರ, ಸ್ವಾಧೀನ ಇದ್ದ ಬಗ್ಗೆ ಯಾವುದೇ ದಾಖಲಾತಿ ಅಸ್ತಿತ್ವದಲ್ಲಿಲ್ಲ ಎಂದರೆ ಸಾಕ್ಷಿ ನಿಡಿ-1 ಇದೆ ಎಂದು ಹೇಳುತ್ತಾರೆ. ವಾದಿಗೆ ಮೋಸ ಮಾಡುವ

ಉದ್ದೇಶದಿಂದ ನಿಡಿ-1 ನ್ನು ನೀವು ಹಾಗೂ 1 ನೇ ಪ್ರತಿವಾದಿ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ವಾದಿ ಹೂಡಿರುವ ದಾವೆಗೆ ನೀವೊಬ್ಬರೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದು ಎಂದರೆ ಸರಿ. ಪ್ರತಿವಾದ ಪತ್ರದ ಖಂಡಿಕೆ 2 ಮತ್ತು 3 ರಲ್ಲಿ ಪಕ್ಷಗಾರರ ಸಂಬಂಧ ಹಾಗೂ ವಿಭಾಗ ಪತ್ರದ ಬಗ್ಗೆ ಒಪ್ಪಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಖಂಡಿಕೆ 2 ಮತ್ತು 3 ರಲ್ಲಿ ಪಕ್ಷಗಾರರ ಸಂಬಂಧ ಹಾಗೂ ವಿಭಾಗ ಪತ್ರದ ಬಗ್ಗೆ ಒಪ್ಪಿಕೊಂಡಿದ್ದರೂ, ಮೋಸ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಪಕ್ಷಗಾರರು ವಿಭಾಗ ಪತ್ರದಲ್ಲಿ ತಿದ್ದುಪಡಿ ಮಾಡಿ, ವಾದಿಗೆ ತಿದ್ದುಪಡಿ ಕರಾರು ಪತ್ರವನ್ನು ಬರೆದುಕೊಡಲು ಭಾಧ್ಯರಾಗಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ, ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.